ನಿಮ್ಮೊಡನೆ

# ಕನ್ನಡಕ್ಕಾಗಿ ಕೈ ಎತ್ತಿದರಷ್ಟೇ ಸಾಲದು ಪ್ರಾಮಾಣಿಕ ಕೆಲಸವನ್ನೂ ಮಾಡಬೇಕು

ಹಂಪಿ ವಿ.ವಿ. ಸೇರಿದಂತೆ ಕನ್ನಡದ ಸಂಸ್ಥೆಗಳಿಗೆ ನಿರ್ದಿಷ್ಟ ಕ್ರಿಯಾಯೋಜನೆ ಇನ್ನು ಮುಂದಾದರೂ ರೂಪುಗೊಳ್ಳಬೇಕಾಗಿದೆ. ಆ ಯೋಜನೆಗಳು ಕಾಲಮಿತಿಯಲ್ಲಿ ಪೂರ್ಣಗೊಳ್ಳುವಂತೆ ನೋಡಿಕೊಳ್ಳಬೇಕಾಗಿದೆ. ಆಗ, ಸರ್ಕಾರದಿಂದ ಪಡೆಯುವ ಅನುದಾನ ಹಕ್ಕಾಗಿ ಪರಿಣಮಿಸುತ್ತದೆ. ಇಲ್ಲದೆ ಹೋದಲ್ಲಿ ಕನ್ನಡದ ಹೆಸರಲ್ಲಿ ಸಾರ್ವಜನಿಕರ ಹಣದ ಅಪಬಳಕೆ ನಡೆಯುತ್ತದಷ್ಟೇ.

ಹಂಪಿಯ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಅನುದಾನ ಕಡಿತ ಮಾಡಿರುವ ಸರ್ಕಾರದ ನಿರ್ಧಾರ ಸಹಜವಾಗಿಯೇ ಕನ್ನಡಪ್ರೇಮಿಗಳ ಖಂಡನೆಗೆ ಒಳಗಾಗಿದೆ. ಕನ್ನಡದ ಕೆಲಸದಲ್ಲಿ ತೊಡಗಿರುವ, ಕನ್ನಡಪ್ರಜ್ಞೆಯನ್ನು ವಿಶ್ವಪ್ರಜ್ಞೆಯಾಗಿಸುವ ಉದ್ದೇಶದ ಸಂಸ್ಥೆಗೆ ಅನುದಾನ ಕಡಿತಗೊಳಿಸುವುದು ಸರಿಯಲ್ಲ. ಹಣಕಾಸು ಬಿಕ್ಕಟ್ಟಿನ ಸಂದರ್ಭ ಎನ್ನುವುದಾದರೆ, ಜಾತಿಗಳ ಹೆಸರಿನಲ್ಲಿ ಹೊಸದಾಗಿ ನಿಗಮಗಳನ್ನು ಸ್ಥಾಪಿಸಿರುವ ಸರ್ಕಾರ, ಅವುಗಳಿಗಾಗಿ ನೂರಾರು ಕೋಟಿ ರೂಪಾಯಿಗಳನ್ನು ಉದಾರವಾಗಿ ನೀಡುತ್ತಿದೆ. ಜಾತಿಸಂದರ್ಭದಲ್ಲಿ ಎದುರಾಗದ ಆರ್ಥಿಕ ಬಿಕ್ಕಟ್ಟು, ಭಾಷೆಯ ಸಂದರ್ಭದಲ್ಲಿ ಎದುರಾಗುತ್ತದೆ ಎನ್ನುವುದನ್ನು ಒಪ್ಪಲಾಗದು.

ಕನ್ನಡ ವಿಶ್ವವಿದ್ಯಾಲಯಕ್ಕೆ ವಾರ್ಷಿಕ 5 ಕೋಟಿ ರೂಪಾಯಿ ಅನುದಾನ ದೊರೆಯುತ್ತಿದ್ದು, ಆ ಮೊತ್ತ ಸಿಬ್ಬಂದಿಯ ಸಂಬಳಕ್ಕೆ ವಿನಿಯೋಗವಾಗುತ್ತಿದೆ. ಹಾಗಾಗಿ ಹೊಸ ಕಾರ್ಯಕ್ರಮ, ಸಂಶೋಧನೆಗಳನ್ನು ಹಮ್ಮಿಕೊಳ್ಳಲು ವಿಶ್ವವಿದ್ಯಾಲಯ ಹಣಕಾಸಿನ ಮುಗ್ಗಟ್ಟು ಎದುರಿಸುತ್ತಿದೆ. 2020–21ನೇ ಸಾಲಿನಲ್ಲಿ ಸರ್ಕಾರದಿಂದ 50 ಲಕ್ಷ ರೂಪಾಯಿ ಮಂಜೂರಾಗಿದ್ದು, ಅದರಲ್ಲಿ 12.5 ಲಕ್ಷ ರೂಪಾಯಿಗಳಷ್ಟೇ ಬಿಡುಗಡೆಯಾಗಿದೆ. ಕಾಲಮಾನಕ್ಕೆ ತಕ್ಕಂತೆ ಸರ್ಕಾರ ಹೆಚ್ಚಿನ ಅನುದಾನ ನೀಡಿದರೆ ಮಾತ್ರ ವಿಶ್ವವಿದ್ಯಾಲಯ ತನ್ನ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದು ಸಾಧ್ಯ ಎಂದು ವಿ.ವಿ. ಕುಲಸಚಿವರು ಹೇಳಿದ್ದಾರೆ. ಅವರ ಮಾತು ನಿಜ. ಸರ್ಕಾರ ಜಿಪುಣತನ ತೋರಿದಲ್ಲಿ, ವಿಶ್ವವಿದ್ಯಾಲಯದ ಕೈಕಟ್ಟಿಹಾಕಿದಂತಾಗುವುದು ಸಹಜ.

ಕನ್ನಡ ನಾಡು–ನುಡಿ ಏಳಿಗೆಯ ಉದ್ದೇಶದಿಂದ ಸರ್ಕಾರ ಒಂದಷ್ಟು ಅಕಾಡೆಮಿ, ಪ್ರಾಧಿಕಾರಗಳನ್ನು ಸ್ಥಾಪಿಸಿ ಪೋಷಿಸುತ್ತಿದೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ಬೇರೆ ಬೇರೆ ಕಾರಣಗಳೊಡ್ಡಿ ಸಾಂಸ್ಕೃತಿಕ ಕ್ಷೇತ್ರಕ್ಕೆ ನೀಡುತ್ತಿರುವ ಅನುದಾನವನ್ನು ಕಡಿತಗೊಳಿಸುತ್ತಿದೆ. ತಾನೇ ಸ್ಥಾಪಿಸಿರುವ ಸಂಸ್ಥೆಗಳನ್ನು ತಾನೇ ದುರ್ಬಲಗೊಳಿಸುವುದು ವಿವೇಕದ ನಡೆಯಲ್ಲ. ಈ ಸಂಸ್ಥೆಗಳು ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲವೆಂದಾದರೆ ಅವುಗಳನ್ನು ಸರಿದಾರಿಗೆ ತರಬೇಕು. ಅನುಪಯುಕ್ತ ಎನ್ನುವುದಾದರೆ ಅವುಗಳನ್ನು ಮುಚ್ಚಬೇಕು. ಇವೆರಡನ್ನೂ ಮಾಡದೆ ಅನುದಾನದಲ್ಲಿ ಚೌಕಾಸಿ ಮಾಡುವುದರಿಂದ, ಸಾರ್ವಜನಿಕ ಹಣದ ಅಪಬಳಕೆಯಾಗುತ್ತದೆಯೇ ಹೊರತು ಯಾವುದೇ ಉಪಯೋಗವಿಲ್ಲ.

ಕನ್ನಡದ ಹೆಸರಿನಲ್ಲಿ ಕೋಟ್ಯಂತರ ರೂಪಾಯಿಗಳನ್ನು ಪಡೆಯುವ ಸಂಸ್ಥೆಗಳು, ತಾವು ಪಡೆಯುವ ಹಣಕ್ಕೆ ಉತ್ತರದಾಯಿತ್ವ ಹೊಂದಿರಬೇಕು. ಕನ್ನಡ ವಿಶ್ವವಿದ್ಯಾಲಯದ ಉದಾಹರಣೆಯನ್ನೇ ನೋಡಿ. ನಾಡು ನುಡಿಗೆ ತೊಡಕು ಎದುರಾದಾಗಲೆಲ್ಲ ಕನ್ನಡಿಗರು ಹಂಪಿಯತ್ತ ನೋಡಬೇಕಾಗಿತ್ತು. ಇದಕ್ಕೆ ಬದಲಾಗಿ, ವಿಶ್ವವಿದ್ಯಾಲಯವೇ ಆಗಾಗ ತಬ್ಬಲಿ ಮಗುವಿನಂತೆ ರೋದಿಸುತ್ತಿದೆ. ಸ್ಥಾಪನೆಯಾಗಿ ಮೂರು ದಶಕಗಳು ಕಳೆದರೂ ಜನಸಾಮಾನ್ಯರಿಗೆ ಹತ್ತಿರವಾಗುವ ನಿಟ್ಟಿನಲ್ಲಿ ವಿಶ್ವವಿದ್ಯಾಲಯ ಯಾವ ಗಮನಾರ್ಹ ಕೆಲಸವನ್ನೂ ಮಾಡಿದಂತಿಲ್ಲ. ಕನ್ನಡದ ದಿಕ್ಕುದೆಸೆ ಬದಲಿಸುವಂತಹ ವಿದ್ವತ್ಪೂರ್ಣ ಕೆಲಸ ಮಾಡಿರುವುದೂ ಸಾರ್ವಜನಿಕರ ಗಮನಕ್ಕೆ ಬಂದಿಲ್ಲ. ಸಂವಾದಗಳ ಮೂಲಕ ಕನ್ನಡಿಗರ ವೈಚಾರಿಕಪ್ರಜ್ಞೆಯನ್ನು ಪ್ರಚೋದಿಸಬೇಕಿದ್ದ ಸಂಸ್ಥೆ ತುಂಗಭದ್ರೆಯ ಜೋಗುಳಕ್ಕೆ ಮೈಮರೆತಂತಿದೆ. ಸಂಸ್ಥೆಯ ಕೆಲವು ವಿದ್ವಾಂಸರು ತಮ್ಮ ವೈಯಕ್ತಿಕ ವರ್ಚಸ್ಸಿನ ಮೂಲಕ ಸಹೃದಯರಿಗೆ ಪರಿಚಿತರೇ ಹೊರತು, ವಿದ್ಯಾಲಯದ ಮೂಲಕವಲ್ಲ. ವಾಸ್ತವ ಹೀಗಿರುವಾಗ, ಕನ್ನಡದ ಹೆಸರಿದೆ ಎಂದಮಾತ್ರಕ್ಕೆ ವಿಶ್ವವಿದ್ಯಾಲಯವೊಂದು ಜನಮನದಲ್ಲಿ ಸ್ಥಾನ ಪಡೆದೀತೆ?

ವಿಶ್ವವಿದ್ಯಾಲಯ ಮಾತ್ರವಲ್ಲ; ಕನ್ನಡದ ಹೆಸರಿನ ಪ್ರಾಧಿಕಾರ–ಅಕಾಡೆಮಿಗಳಿಗೆ ಕೂಡ ತಮ್ಮ ಕಾರ್ಯನಿರ್ವಹಣೆಯ ಬಗ್ಗೆ ಸ್ಪಷ್ಟತೆ ಇರುವಂತಿಲ್ಲ. ಪುಸ್ತಕ ಪ್ರಾಧಿಕಾರ ಮತ್ತು ಸಾಹಿತ್ಯ ಅಕಾಡೆಮಿಯ ನಡುವಿನ ವ್ಯತ್ಯಾಸ ಏನೆಂದು ಕೇಳಿದರೆ ಹೇಳುವುದು ಕಷ್ಟ. ಪುಸ್ತಕ ಮುದ್ರಣ ಮತ್ತು ಮಾರಾಟದ ಚಟುವಟಿಕೆಗಳನ್ನು ಎಲ್ಲರೂ ಏಕೆ ಮಾಡಬೇಕು ಎನ್ನುವುದರ ಬಗ್ಗೆ ಸ್ಪಷ್ಟತೆಯಿಲ್ಲ. ಯಾರು ಏನು ಮಾಡುತ್ತಿದ್ದಾರೆ ಮತ್ತು ಏಕೆ ಮಾಡುತ್ತಿದ್ದಾರೆ ಎನ್ನುವುದರ ಸ್ಪಷ್ಟತೆ ಮಾಡುವವರಿಗೂ ಇಲ್ಲ, ಅನುದಾನ ನೀಡುವವರಿಗೂ ಇಲ್ಲ. ಈಗಿನ ಸಾಂಸ್ಕೃತಿಕ ವ್ಯವಸ್ಥೆಗೆ ಅಧಿಕಾರ ಕೇಂದ್ರಗಳನ್ನು ಸೃಷ್ಟಿಸುವಲ್ಲಿ ಆಸಕ್ತಿಯೇ ಹೊರತು, ಸೃಜನಶೀಲ ಚಟುವಟಿಕೆಗಳಲ್ಲಿ ಅಲ್ಲ.

ಕನ್ನಡ ವಿಶ್ವವಿದ್ಯಾಲಯದ ಚಟುವಟಿಕೆಗಳ ಬಗ್ಗೆ ಅಸಮಾಧಾನವಿದ್ದರೂ ಅದನ್ನು ಉಳಿಸಿ ಬೆಳೆಸುವ ಬಗ್ಗೆ ಕನ್ನಡಿಗರು ತಲೆ ಕೆಡಿಸಿಕೊಳ್ಳಲೇಬೇಕಾಗಿದೆ. ಅದರ ಸ್ಥಾಪನೆಯ ಹಿಂದಿನ ಉದ್ದೇಶ ಮಹತ್ತರವಾದುದು. ಭಾಷೆಯ ಹೆಸರಿನಲ್ಲಿ ವಿಶ್ವದಲ್ಲಿ ಇರುವ ಏಕೈಕ ವಿಶ್ವವಿದ್ಯಾಲಯ ನಮ್ಮದು. ಇಂಥ ವಿಶ್ವವಿದ್ಯಾಲಯ ಸಕ್ರಿಯವಾಗಿ ಉಳಿಯುವ ನಿಟ್ಟಿನಲ್ಲಿ ಹಣದ ಕೊರತೆಯಾಗಬಾರದು. ಹಂಪಿ ವಿ.ವಿ. ಸೇರಿದಂತೆ ಕನ್ನಡದ ಸಂಸ್ಥೆಗಳಿಗೆ ನಿರ್ದಿಷ್ಟ ಕ್ರಿಯಾಯೋಜನೆ ಇನ್ನು ಮುಂದಾದರೂ ರೂಪುಗೊಳ್ಳಬೇಕಾಗಿದೆ. ಆ ಯೋಜನೆಗಳು ಕಾಲಮಿತಿಯಲ್ಲಿ ಪೂರ್ಣಗೊಳ್ಳುವಂತೆ ನೋಡಿಕೊಳ್ಳಬೇಕಾಗಿದೆ. ಆಗ, ಸರ್ಕಾರದಿಂದ ಪಡೆಯುವ ಅನುದಾನ ಹಕ್ಕಾಗಿ ಪರಿಣಮಿಸುತ್ತದೆ. ಇಲ್ಲದೆ ಹೋದಲ್ಲಿ ಕನ್ನಡದ ಹೆಸರಲ್ಲಿ ಸಾರ್ವಜನಿಕರ ಹಣದ ಅಪಬಳಕೆ ನಡೆಯುತ್ತದಷ್ಟೇ. ಕನ್ನಡಕ್ಕಾಗಿ ಕೈಯೆತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ ಎನ್ನುವ ಕವಿನುಡಿಯನ್ನು ನಾವು ವಾಚ್ಯಾರ್ಥದಲ್ಲಿ ಗ್ರಹಿಸಬಾರದು.

■ ರಘುನಾಥ ಚ.ಹ.




ಈಶ್ವರ್